

## ಕೋಟಿಪತಿ ಕಬೀರ್

ನಿರ್ದೇಶಕ ಕಬೀರ್ ಖಾನ್‌ಗೆ ಅದೃಷ್ಟ ಖುಲಾಯಿಸಿದೆ. 'ಏಕ್ ಥಾ ಟೈಗರ್' ಚಿತ್ರ ಬಾಕ್ಸಾಫೀಸ್‌ನಲ್ಲಿ 200 ಕೋಟಿ ರೂಪಾಯಿ ಸಂಗ್ರಹಿಸಿ ಇನ್ನೂ ಮುನ್ನಡೆದಿದೆ. ಇದರ ಕ್ರೆಡಿಟ್ ನಟ ಸಲ್ಮಾನ್ ಖಾನ್‌ಗೆ ದಕ್ಕಿದಂತೆಯೇ ನಿರ್ದೇಶಕ ಕಬೀರ್ ಖಾನ್‌ಗೂ ಲಭಿಸಿರುವುದು ವಿಶೇಷ. ಬಹಳಷ್ಟು ದೊಡ್ಡ ಬ್ಯಾನರ್‌ಗಳು ತಮ್ಮ ಹೊಸ ಚಿತ್ರಕ್ಕಾಗಿ ಕಬೀರ್ ಖಾನ್‌ನ ಬೆನ್ನು ಹತ್ತಿವೆ. ಒಂದು ನಿರ್ಮಾಣ ಸಂಸ್ಥೆಯಂತೂ ತನ್ನ ಮುಂದಿನ ಚಿತ್ರ ನಿರ್ದೇಶಿಸಲು ಕಬೀರ್ ಖಾನ್‌ಗೆ 12 ಕೋಟಿ ರೂಪಾಯಿ ಸಂಭಾವನೆಯ ಆಫರ್ ನೀಡಿದೆಯಂತೆ. ಈ ಸುದ್ದಿಯ ಬಗ್ಗೆ ಕಬೀರ್ ಖಾನ್ ತುಟಿಪಿಟಕ್ ಎಂದಿಲ್ಲ. ಆತ ಈ ಆಫರ್ ಒಪ್ಪಿದ್ದಾನೆಯೇ ಎನ್ನುವುದೂ ಸ್ಪಷ್ಟವಾಗಿಲ್ಲ.

ಆದರೆ 'ಏಕ್ ಥಾ ಟೈಗರ್'ನ ಭಾಗ–2 ಬರುವುದಿಲ್ಲ ಎಂದು ಕಬೀರ್ ಖಾನ್ ಸ್ಪಷ್ಟ ಪಡಿಸಿದ್ದಾನೆ. 'ಈ ಬಗ್ಗೆ ಬಂದಿರುವ ಸುದ್ದಿಗಳು ಸರಿಯಲ್ಲ. ಏಕ್ ಥಾ ಟೈಗರ್‌ನ ಎರಡನೇ ಭಾಗದ ಕಥೆಯ ಬಗ್ಗೆ ನನಗೆ ಯಾವುದೇ ಐಡಿಯಾ ಇಲ್ಲ' ಎಂದಾತ ಹೇಳಿದ್ದಾನೆ. ಸಲ್ಮಾನ್ ನಟಿಸಿದ 'ದಭಾಂಗ್' ಯಶಸ್ಸಿನ ಬೆನ್ನಲ್ಲೆ ಅದರ 2ನೇ ಭಾಗ ಈಗ ಸಿದ್ಧವಾಗಿದೆ. ಈ ಹಿನ್ನೆಲೆಯಲ್ಲೇ 'ಏಕ್ ಥಾ ಟೈಗರ್'ನ 2ನೇ ಭಾಗದ ಬಗ್ಗೆ ಪುಕಾರು ಹಬ್ಬಿರಬೇಕು ಎಂದು ಕಬೀರ್ ಖಾನ್ ಊಹೆ ಮಾಡಿದ್ದಾನೆ. ಈವರೆಗೆ ಡಾಕ್ಯುಮೆಂಟರಿಗಳಲ್ಲಿ ಮುಳುಗಿದ್ದ ಕಬೀರ್ ಖಾನ್ ಇನ್ನೀಗ ಬಾಲಿವುಡ್‌ನಲ್ಲಿ ಫುಲ್ ಬ್ಯುಸಿಯಾಗುವುದಂತೂ ಖಂಡಿತಾ.

## ಪ್ರಿಯಾಂಕಾ ದುಬಾರಿ



'ಬರ್ಫಿ' ಆಸ್ಕರ್ ಪ್ರಶಸ್ತಿಗೆ ಭಾರತದಿಂದ ಎಂಟ್ರಿ ಎನ್ನುವ ಸುದ್ದಿ ಹೊರ ಬಂದ ಬೆನ್ನಲ್ಲೇ ಪ್ರಿಯಾಂಕಾ ಚೋಪ್ರಾ ತೀರಾ ದುಬಾರಿಯಾಗಿದ್ದಾಳೆ ಎನ್ನುವ ಸುದ್ದಿಯೂ ಹೊರಬಿದ್ದಿದೆ. 'ವಿಲ್ಸ್ ಲೈಫ್‌ಸ್ಟೈಲ್ ಫ್ಯಾಶನ್ ವೀಕ್'ನಲ್ಲಿ ರ್‍ಯಾಂಪ್ ಮೇಲೆ ಹೆಜ್ಜೆ ಹಾಕಿಸಲೆಂದು ಪ್ರಿಯಾಂಕಾಳ ಬಳಿಗೆ ಹೋಗಿದ್ದ ಫ್ಯಾಶನ್ ಡಿಸೈನರ್ ಒಬ್ಬರು ಪ್ರಿಯಾಂಕಾ ಸಂಭಾವನೆಯ ಮೊತ್ತ ಕೇಳಿ ಗಾಬರಿ ಬಿದ್ದು ವಾಪಸು ಬಂದಿದ್ದಾರಂತೆ! ಸಾಮಾನ್ಯವಾಗಿ ಖ್ಯಾತನಾಮ ಡಿಸೈನರ್‌ಗಳ ಬಟ್ಟೆಗಳನ್ನು ಹಾಕಿಕೊಂಡು ರ್‍ಯಾಂಪ್ ಮೇಲೆ ಹೆಜ್ಜೆ ಹಾಕಲು ಪ್ರಿಯಾಂಕಾ 30 ಲಕ್ಷ ರೂಪಾಯಿಗಳನ್ನು ತೆಗೆದುಕೊಳ್ಳುತ್ತಾಳಂತೆ. ಆದರೆ ಈ ಸಲ ಆಕೆಯನ್ನು ಸಂಪರ್ಕಿಸಿದ ಫ್ಯಾಶನ್ ಡಿಸೈನರ್‌ಗೆ 'ನನ್ನ ಸಂಭಾವನೆ ಈಗ ಭರ್ತಿ ಒಂದು ಕೋಟಿ ರೂಪಾಯಿ' ಎಂದು ಪ್ರಿಯಾಂಕಾ ಖಡಕ್ಕಾಗಿ ಹೇಳಿದ್ದಳಂತೆ. ಪಾಪ, ಡಿಸೈನರ್ ಪೆಚ್ಚು ಮೋರೆ ಹಾಕಿ ಮರಳಿದನಂತೆ.

ಆಸ್ಕರ್ ಲೆವೆಲ್ ಎಂದರೆ ಸಾಮಾನ್ಯವೆ..? ಎಂದು ಪ್ರಿಯಾಂಕಾಗೆ ಆಗದಿದ್ದವರು ಈ ಸುದ್ದಿಯನ್ನು ಪ್ರಚಾರ ಮಾಡಿಕೊಂಡು ಓಡಾಡುತ್ತಿದ್ದಾರಂತೆ!



## ಬಿಪಾಸಾ ಸ್ಟೈಲ್

ವೈಯಕ್ತಿಕ ವಿವಾದಗಳು ಏನೇ ಇದ್ದರೂ ಬಿಪಾಸಾ ಬಸು ತನ್ನ ಮೈಕಟ್ಟಿನ ಬಗ್ಗೆ ಭಾರೀ ಕಟ್ಟುನಿಟ್ಟು. ಏನೇ ಕೆಲಸದ ಒತ್ತಡಗಳಿದ್ದರೂ ಆಕೆ ಪ್ರತಿದಿನವೂ ಜಿಮ್‌ಗೆ ಹೋಗುವುದನ್ನು ತಪ್ಪಿಸಿಕೊಳ್ಳುವುದಿಲ್ಲ. ಕೋಚ್ ಜತೆಗೆ ನಿರಂತರ ಸಂಪರ್ಕ ಇಟ್ಟುಕೊಂಡು, ಪಥ್ಯಗಳನ್ನೂ ಕಟ್ಟುನಿಟ್ಟಾಗಿ ಪಾಲಿಸುತ್ತಾಳೆ.

ಮೊನ್ನೆ ಆಕೆ ಜಿಮ್‌ನಲ್ಲಿ ಅಭ್ಯಾಸದಲ್ಲಿ ತೊಡಗಿದ್ದಾಗ ಪರಿಚಯದ ಸ್ನೇಹಿತನೊಬ್ಬ ಬಂದು ಆಕೆಯ ಪಕ್ಕದಲ್ಲೇ ಅಭ್ಯಾಸ ಶುರು ಮಾಡಿದನಂತೆ. ಅಭ್ಯಾಸಕ್ಕಿಂತ ಮೊದಲೇ ಆತ ಬಿಪ್ಸ್ ಜತೆ ಮಾತಿಗೆ ತೊಡಗಿದನಂತೆ. ಐದು ನಿಮಿಷಗಳ ಕಾಲ ಆತನ ಮಾತಿಗೆ ಕಿವಿಕೊಟ್ಟ ಬಿಪಾಸಾ, ಬಳಿಕ ಮೌನವಾಗಿಯೇ ಅಭ್ಯಾಸದತ್ತ ಗಮನ ಹರಿಸಿದಳು. ಆದರೆ ಆ ಸ್ನೇಹಿತನ ಮಾತು ನಿಲ್ಲಲೇ ಇಲ್ಲ, ನಿರಂತರವಾಗಿ ಮುಂದುವರಿಯಿತು. ಸುಮಾರು 15 ನಿಮಿಷಗಳ ಕಾಲ ಆತನ ಹರಟೆಯನ್ನು ಸಹಿಸಿಕೊಂಡ ಬಿಪ್ಸ್, ಬಳಿಕ ಮಾತನ್ನು ಅರ್ಧಕ್ಕೇ ತುಂಡರಿಸಿ, ತನ್ನ ಕೋಚ್ ಜತೆಗೆ ಬೇರೆ ಕೋಣೆಗೆ ಹೋಗಿ ಅಭ್ಯಾಸದಲ್ಲಿ ನಿರತಳಾದಳಂತೆ. ಆ ಸ್ನೇಹಿತ ಪೆಚ್ಚಾಗಿ ಅಲ್ಲೇ ಸೈಕಲ್ ಹೊಡೆಯತೊಡಗಿದನಂತೆ.

■ ಬಿಂದು